‘ಹೌದು ಅತ್ತೆ, ಬನ್ನಿ, ಹೋಗ್ಬರೋಣ..’ ಅಂದಿದ್ದಳು. ಸೊಸೆಯ ಮೇಲೆ ಇದ್ದಿರಬಹುದಾದ ಸಣ್ಣಪುಟ್ಟ ಆಕ್ಷೇಪಣೆಗಳೆಲ್ಲಾ ಆ ಸಮಯದಲ್ಲಿ ಬುಡಸಮೇತ ಕಿತ್ತುಕೊಂಡು ಹೋಗಿರಬೇಕು, ರಾಧಮ್ಮನ ಮುಖ ಅರಳಿ ಹೋಗಿತ್ತು.

‘ಏರ್ಬಾರ್ದು ಅಂತೇನಿಲ್ಲ, ಆದ್ರೆ ಭವಾನಿ ಇಲ್ಲಿ ಒಬ್ಳೇ ಆಗ್ತಾಳಲ್ಲೇ. ಈ ಹುಡುಗಂಗೋ, ಬಾಲ ಒಂದು ಕಮ್ಮಿ. ಯಾರಾರೂ ಒಂದು ಕಣ್ಣು ಇಟ್ಟಿರ್ದಿದ್ರೆ ಅಲ್ಲಿದ್ದೇ ಮಾಡ್ತಿರುತ್ತೆ..’

‘ಹೋಗ್ಬನ್ನಿ ಮಾರೆರಾ, ನಾನಿಲ್ವಾ ಇಲ್ಲಿ? ನಿಮ್ಮ ಮೊಮ್ಮಗನ್ನ ಎರಡು ದಿನದ ಮಟ್ಟಿಗೆ ನೋಡ್ಕಳ್ಳೋಕೆ ನಂಕೈಲಾಗಲ್ವಾ? ನಿಮಗೆ ಆಸೆ ಇದ್ರೆ ಹೊರಡೋದೇ..’ ಭವಾನಿ ಒತ್ತಾಸೆಯ ಮಾತಾಡಿದ್ದಳು.

ನಾಗಶ್ರೀ ಅತ್ತೆಯ ಕೋಣೆಗೆ ಹೋಗಿ ಪೆಠಾರಿಯಿಂದ ತಾನೇ ಎರಡು ಸೀರೆ, ಎರಡು ಕುಪ್ಪಸ ಆರಿಸಿಕೊಂಡು ಬಂದು ತನ್ನ ಚೀಲದೊಳಗೆ ಜೋಡಿಸಿಕೊಂಡು, ಪ್ರೀತಿಪೂರ್ವಕವಾಗಿ ಒಬ್ಬರ ಆಳ್ವಿಕೆಗೆ ಒಳಪಡುವುದರಲ್ಲಿ ಅದಿನ್ನೆಂತಾ ಸುಖವಿದೆ ಅನ್ನುವ ಹಾಗೆ ಅಮ್ಮನ ಕಣ್ಣುಗಳು ಮಿನುಗಿದ್ದನ್ನು ಗಮನಿಸಿದ್ದ ರಾಮಚಂದ್ರ. ತನ್ನ ಹೆಂಡತಿಗೆ ತಾನು ಹೇಳಿದ್ದು ನಡೆಯಬೇಕು ಎನ್ನುವ ಮೊಂಡು ಹಟವಿರುವುದು ನಿಜ, ಅದು ಅವಳು ಬೆಳೆದು ಬಂದ ರೀತಿಯ ಪರಿಣಾಮ. ಆದರೆ ಅವಳು ಕೆಟ್ಟವಳೇನಲ್ಲ, ಒಳ್ಳೆಯ ಹುಡುಗಿ ನಾಗಶ್ರೀ ಎನ್ನುವ ಅನಿಸಿಕೆಯಿಂದ ರಾಮಚಂದ್ರ ಮುದಗೊಂಡಿದ್ದ. ದಂಪತಿಯ ನಡುವಿನ ನಿಕಟ ಸಾಮರಸ್ಯ ಕೂಡಾ ಇಂತಾದ್ದೊಂದು ಆರ್ದ್ರಭಾವದ ಹಿಂದೆ ಕೆಲಸ ಮಾಡುತ್ತಿದ್ದಿದ್ದು ಸುಳ್ಳಲ್ಲ. ಮಗಳನ್ನು ಹೆಂಡತಿಯ ತೌರಿಗೆ ಕಳಿಸಿಕೊಟ್ಟ ಮೇಲೆ ಮತ್ತೆ ನವದಂಪತಿಯಾದಂತಹ ಭಾವ ಇಬ್ಬರ ನಡುವೆ ರಸಮಯ ಗಳಿಗೆಗಳನ್ನು ಸೃಜಿಸಿತ್ತು.

ಅಂದು ಅವಸರವಸರದಲ್ಲಿ ಗುಟುಕಿಸಿ ತೃಪ್ತಿಗಿಂತ ಹೆಚ್ಚು ಅತೃಪ್ತಿಯನ್ನುಂಟುಮಾಡಿದ್ದ ಸಂಬಂಧಕ್ಕೆ ವಿರಾಮವಾಗಿ ಸವಿಯನ್ನುಣ್ಣುವ ಅವಕಾಶ ದೊರಕಿತ್ತು. ದಾಂಪತ್ಯ ಅಂದರೆ ಮೊಗೆಮೊಗೆದು ಸವಿದಷ್ಟೂ ಸುಧೆಯನ್ನು ನೀಡುವ ಅಮೃತಕುಂಭ ಎನ್ನುವ ಭಾವನೆ. ನಾಗಶ್ರೀ ಕೂಡಾ ನಿರುಮ್ಮಳವಾಗಿದ್ದಳು. ಮನೆಯೊಳಗಿನ ಯಾವುದೇ ಕೆಲಸವನ್ನು ಮಾಡಲೇಬೇಕು ಎನ್ನುವ ಒತ್ತಡವಿಲ್ಲದೆ, ಅವಳಿಗೆ ತೋಚಿದಷ್ಟು ಕೆಲಸವನ್ನು ನೋಡಿದವರ ಕಣ್ಣಟ್ಟಿಗೆ ಎನ್ನುವಂತೆ ಆಟ ಆಡಿದ ಹಾಗೆ ಮಾಡುತ್ತಾ, ರಾಮಚಂದ್ರನಿಗೆ ಕೂಡಾ ಮನೆಯಲ್ಲಿ ಹಿರಿತನದ ಜವಾಬ್ದಾರಿಯೇನಿರಲಿಲ್ಲ. ಅದೇನಿದ್ದರೂ ಅಣ್ಣ ರಘುರಾಮನ ಕೊರಳಿಗೆ. ಹಾಗೆಂದು ಇವನು ಕೆಲಸಗಳ್ಳನಾಗಿ ಹೆಂಡತಿಯ ಮನೆಗೆ ಓಡಾಡಿಕೊಂಡಿರುತ್ತಾ ಕಾಲಹರಣ ಮಾಡುತ್ತಿದ್ದವನಲ್ಲ. ಬಿಗೀ ಕೆಲಸಗಳಿರುತ್ತಿದ್ದ ಅಡಿಕೆಕುಯ್ಲು, ಗದ್ದೆಕುಯ್ಲಿನ ಕಾಲದಲ್ಲಿ ಅಣ್ಣನೊಡನೆ ಅವನೂ ದುಡಿಯುತ್ತಿದ್ದ. ಅಣ್ಣನೊಡನೆ ಅನ್ನುವುದಕ್ಕಿಂತ ಮನೆಯಲ್ಲಿದ್ದ ಬೇರೆ ಕೆಲಸದಾಳುಗಳ ಜೊತೆ ಕೈ ಜೋಡಿಸುತ್ತಿದ್ದ ಅನ್ನುವುದು ಒಪ್ಪತಕ್ಕ ಮಾತು. ತೌರಿನಲ್ಲಿರಲಿ, ಗಂಡನ ಮನೆಯಾಗಿರಲಿ, ನಾಗಶ್ರೀ ಯಾವತ್ತೂ ಅಡಿಕೆ ಸುಲಿತ ಮಾಡಿದವಳಲ್ಲ. ಅದರಲ್ಲಿ ಪರಿಣತಿ ಇದ್ದವಳೂ ಅಲ್ಲ. ವಾರಗಿತ್ತಿ ಒಂದೇ ಉಸುರಿಗೆ ಎನ್ನುವಂತೆ ಮನೆಗೆಲಸಗಳನ್ನು ಮಾಡಿ ಮುಗಿಸಿ ಅಡಿಕೆ ಸುಲಿತಕ್ಕೆ ಕೂರುವುದನ್ನು ಕಂಡು ಅವಳಿಗೆ ಅಚ್ಚರಿಯಾಗುತ್ತಿತ್ತು. ಮೂಗಿಗೆ ಕವಡೆ ಕಟ್ಟಿಕೊಂಡು ಅನ್ನುವಂತೆ ಹೀಗೆ ದುಡಿಯಬೇಕಾದ ಅವಶ್ಯಕತೆ ಏನಿದೆ ಅನಿಸುತ್ತಿತ್ತು. ಇದ್ದರಲ್ಲ ಕೆಲಸದಾಳುಗಳು? ಜಯ, ವಿಜಯರಂತಹ ಅಣ್ಣ ತಮ್ಮಂದಿರು? ಇದ್ದರಲ್ಲ ಅತ್ತೆ? ಅಳಿಲು ಸೇವೆ ಅನ್ನುವ ಹಾಗೆ ಕತ್ತಿ ಹೂಡಿಕೊಂಡು ಕೂತು ಅಡಿಕೆ ಸುಲಿಯುತ್ತಾರೆ ಅತ್ತೆ ಅಂದುಕೊಂಡಿದ್ದರೆ ಸುಳ್ಳೇ ಸುಳ್ಳು. ನಾಗಶ್ರೀ ಮೂಗಿನಲಿ ಬೆರಳಿಟ್ಟು ಮುಕುಟವ ತೂಗುವಂತೆ ಅತ್ತೆ ಅಡಿಕೆ ಸುಲಿತದಲ್ಲಿ ಗಟ್ಟಿಗಿತ್ತಿ. ಊಟ, ತಿಂಡಿ, ಇತರ ಅನಿವಾರ್ಯತೆಗಳನ್ನು ಹೊರತುಪಡಿಸಿ ಹೂಡಿದ ಕತ್ತಿ ಬದಿಗಿಡದಂತೆ ತಪಸ್ಸಿಗೆ ಕೂತವರ ಹಾಗೆ ಕೂತು ಅಡಿಕೆ ಸುಲಿತ ಮಾಡಿ ಹೆಡಿಗೆ ತುಂಬಿಸಬಲ್ಲರು ಅತ್ತೆ. ಕೆಲಕೆಲವು ಚಟಗಳಿದ್ದಂತೆ ಕತ್ತೆಯ ಹಾಗೆ ಕೆಲಸ ಮಾಡುವುದೂ ಕೆಲವರಿಗೆ ಒಂದು ಚಟವಾಗಿ ಬಿಟ್ಟಿರುತ್ತದೆಯಾ? ಸುಮ್ಮನೆ ಕೂತರೆ ಅವರಿಗೆ ಉಂಡನ್ನ ಅರಗುವುದಿಲ್ಲವಾ? ವಾರಗಿತ್ತಿಯ ಉತ್ಸುಕತೆಯ ಗುಟ್ಟು ಕೆಲವೇ ದಿನಗಳಲ್ಲಿ ರಟ್ಟಾಯ್ತು. ಭವಾನಿಯೇ ಹೇಳಿದಳು ಒಂದು ದಿನ,

‘ಅಡಿಕೆಕುಯ್ಲಿನ ಹೊತ್ತಿಗೆ ನಾಕು ಕಾಸು ಮಾಡ್ಕಂಡ್ರೆ ಮಾಡ್ಕಂಡ್ವಾಗೆ. ಎಂತಕ್ಕಾರೂ ಬೇಕಾಗುತ್ತೆ. ನಮ್ದೇ ದುಡ್ಡು ಅಂತ ಸಂದರ್ಭಕ್ಕೆ ಸಿಕ್ಕುತ್ತೆ..’

‘ಅಂದ್ರೆ?’

‘ಆಳುಕೆಲಸದೋರ ಥರ ನಾನೂ ದುಡ್ಡು ಇಸ್ಕೋತೀನಿ ಕಣೇ. ಇಂತಿಷ್ಟು ಕೊಳಗ ಅಂತ ಲೆಕ್ಕ ಬರೆಸಿಟ್ಟು ಎಳ್ಳಾಮಾಸೆ ಹೊತ್ತಿಗೆ ವಸೂಲಿ ಮಾಡ್ತೀನಿ..’

‘ಅತ್ತೆ?’

‘ಅವರೂ ಇಸ್ಗಂತಾರೆ. ಕೆಲಸದೋರಿಗಾದ್ರೆ ಕೊಡಲ್ವಾ? ನಾವು ಕೆಲಸ ಮಾಡಿದ್ರೆ ನಮಗೂ ಕೊಡ್ಬೇಕಪ್ಪಾ..’

‘ನಿಮ್ಗೆ ದುಡ್ಡು ಬೇಕಾರೆ ಭಾವ ಕೊಡಲ್ಲ ಅಂತಾರಾ? ಮರಗಟ್ಟೆ ಹೋಗೋ ಚಳೀಲಿ ನಿದ್ದೆ ಬಿಟ್ಗಂಡು ಎಂತಕ್ಕೆ ಕೂತ್ಗಂತೀರಿ? ಬೆನ್ನುಕೋಲು ಮುರ್ಕಂತೀರಿ? ಅರ್ಧ ರಾಜ್ಯ ಕೊಡ್ತೀನಿ ಅಂದ್ರೂ ನನ್ನೈಲಿ ಸಾಧ್ವಿಲ್ಲಪ್ಪಾ..’

‘ಹೇಳಿದ್ನಲ್ಲೇ, ನಂದೇ ದುಡ್ಡು ಅಂತಾದ್ರೆ ಎಂತಕ್ಕಾರೂ ಖರ್ಚು ಮಾಡ್ಬೇಕು ಅನಿಸಿದ್ರೆ ಯಾರ ಮಕ ನೋಡೋ ಪಂಚಾತ್ಕೆ ಇರಲ್ಲ..’

‘ನೀವೊಬ್ರು. ದುಡ್ಡಿನ ಮೇಲೆ ಹೆಸರು ಬರೆದಿರುತ್ತಾ? ಬೇಕು ಅಂದ್ರೆ ಕೇಳಿ ಇಸ್ಕೊಳ್ಳೋದಪ್ಪಾ..’ ಉಡಾಫೆ ಮಾತಾಡಿದ್ದಳು ನಾಗಶ್ರೀ. ಇಂತಾ ನಂದೇ ದುಡ್ಡು ಎನ್ನುವ ವ್ಯವಹಾರ ಅವಳಿಗೆ ಗೊತ್ತಿಲ್ಲ. ತೌರಿಗೆ ಹೋದಾಗಲೆಲ್ಲಾ ಅಮ್ಮ ಕುಪ್ಪಸದ ಖಣದೊಳಗೆ ನೂರೋ, ಇನ್ನೂರೋ ರೂಪಾಯಿಗಳ ನೋಟುಗಳನ್ನಿಟ್ಟು, ಕುಂಕುಮ ಇಡಿಸಿ ಕಳಿಸಿಕೊಡುತ್ತಾಳೆ. ಅವಳೆದುರೇ ಖಣ



## ಇಲ್ಲಿಯವರೆಗೆ

ರಾಮಚಂದ್ರ ನಾಗಶ್ರೀ ಜತೆಗೆ ಆಕೆಯ ತವರು ಮನೆಯಲ್ಲಿ ಠಿಕಾಣಿ ಹೂಡಿದ್ದರು. ಹೊತ್ತುಹೊತ್ತಿಗೆ ಊಟ ತಿಂಡಿ, ಸಂಭ್ರಮದಿಂದ ಇರುವುದನ್ನು ನೋಡಿದ ನಾಗಶ್ರೀ ತಾಯಿಯೂ ಗೆಲುವಾಗಿದ್ದರು. ವಾರ ಕಳೆದು ರಾಮಚಂದ್ರ ತನ್ನ ಮನೆಗೆ ವಾಪಸಾಗುತ್ತಾನೆ. ಗಂಡನ ಮನೆಗೆ ಬಂದ ನಾಗಶ್ರೀ ಹೊಟ್ಟೆತೊಳಸು, ವಾಂತಿ ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಸೊಸೆ ಗರ್ಭಿಣಿಯಾದದ್ದು ಖಚಿತ ಎಂದು ಅತ್ತೆ ರಾಧಮ್ಮ ಸಂಭ್ರಮಿಸುತ್ತಾರೆ. ಇಷ್ಟು ಬೇಗ ಆಗಿರುವುದನ್ನು ರಾಮಚಂದ್ರನೂ ನಿರೀಕ್ಷಿಸಿರಲಿಲ್ಲ. ಗರ್ಭಿಣಿಯ ಬಹುಕಾಲವನ್ನು ತವರಿನಲ್ಲೇ ಕಳೆಯಲು ನಿರ್ಧರಿಸುತ್ತಾಳೆ ನಾಗಶ್ರೀ. ಆದರೆ ತವರಿನಲ್ಲಿ ಯಾವತ್ತೂ ಸಸಾರ ಆಗಬಾರದು ಎಂಬ ಕಿವಿಮಾತನ್ನು ರಾಮಚಂದ್ರನಿಗೆ ಹೇಳುತ್ತಾರೆ ರಾಧಮ್ಮ. ನಾಗಶ್ರೀ ಹೆಣ್ಣುಮಗುವನ್ನು ಹೆರುತ್ತಾಳೆ. ಮಗುವಿಗೆ ಪೂರ್ಣಿಮಾ ಎಂದು ಹೆಸರಿಡುತ್ತಾರೆ. ಒಂದೂವರೆ ವರ್ಷದ ಬಳಿಕ ಎದೆಹಾಲು ಬಿಡಿಸುವ ನೆಪವೊಡ್ಡಿ ಮಗುವನ್ನು ಅಜ್ಜಿಮನೆಯಲ್ಲೇ ಬಿಟ್ಟು ಬರುವ ನಿರ್ಧಾರ ಮಾಡುತ್ತಾಳೆ ನಾಗಶ್ರೀ.